**ದಿನಾಂಕ 10.01.2013 ರಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಕೊಠಡಿ ಸಂಖ್ಯೆ 406, 4ನೇ ಮಹಡಿ, ವಿಕಾಸ ಸೌಧ, ಬೆಂಗಳೂರಿನಲ್ಲಿ ನಡೆದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರಿನ 15ನೇ ವಿಶೇಷ ಸಾಮಾನ್ಯ ಸಭೆಯ ಸಭಾ ನಡುವಳಿಗಳು.**

**ಸಭೆಯಲ್ಲಿ ಹಾಜರಿದ್ದ ಸದಸ್ಯರು**

1. ಶ್ರೀ ರಾಮದಾಸ್ – ಅಧ್ಯಕ್ಷರು
   ವೈದ್ಯಕೀಯ ಶಿಕ್ಷಣ ಸಚಿವರು,
   ಕರ್ನಾಟಕ ಸರ್ಕಾರ, ಬೆಂಗಳೂರು.

2. ಶ್ರೀ ಕೆ.ಎಸ್ ಪ್ರಭಾಕರ, – ಉಪಾಧ್ಯಕ್ಷರು
   ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈ.ಶಿ),
   ಬೆಂಗಳೂರು.

3. ಶ್ರೀಮತಿ ಎಸ್. ಮಂಜುಳ ಗೀತಾ, – ಸದಸ್ಯರು
   ಉಪ ಕಾರ್ಯದರ್ಶಿಗಳು,
   ಆರ್ಥಿಕ ಇಲಾಖೆ, ಬೆಂಗಳೂರು

4. ಶ್ರೀಮತಿ ವಿದ್ಯಾಕುಮಾರಿ.ಕೆ - ಸದಸ್ಯರು
   ಸರ್ಕಾರದ ಉಪ ಕಾರ್ಯದರ್ಶಿಗಳು,
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈ.ಶಿ),
   ಬೆಂಗಳೂರು

5. ಡಾ. .ಜಿ.ಎಸ್. ವೆಂಕಟೇಶ್ – ಸದಸ್ಯರು.
   ನಿರ್ದೇಶಕರು ವೈದ್ಯಕೀಯ ಶಿಕ್ಷಣ, ಬೆಂಗಳೂರು.

6. ಡಾ. ಶಿವಾನಂದ್ ದೊಡ್ಡಮನಿ, – ಸದಸ್ಯರು
   ವೈದ್ಯಕೀಯ ಅಧೀಕ್ಷಕರು, ರಿಮ್ಸ್ ಭೋಧಕ ಆಸ್ಪತ್ರೆ, ರಾಯಚೂರು.

7. ಶ್ರೀ ನಾಗೇಶ್, – ಸದಸ್ಯರು
   ಪ್ರಭಾರಿ ಮುಖ್ಯ ಆಡಳಿತಾಧಿಕಾರಿಗಳು, ರಿಮ್ಸ್, ರಾಯಚೂರು

8. ಶ್ರೀ ಸೈಯದ್ ಜೀಯಾವುದ್ದೀನ್, – ಸದಸ್ಯರು
   ಆರ್ಥಿಕ ಸಲಹೆಗಾರರು, ರಿಮ್ಸ್, ರಾಯಚೂರು

9. ಎಂ. ಪ್ರಭಾವತಿ, – ವಿಶೇಷ ಆಹ್ವಾನಿತರು
ಮುಖ್ಯ ಆಡಳಿತಾಧಿಕಾರಿಗಳು,
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ

10. ಡಾ. ಶಂಕರ್ ಮಲ್ಲಾರಿ ಮಲಪುರೆ, – ವಿಶೇಷ ಆಹ್ವಾನಿತರು
ವಿಶೇಷಾಧಿಕಾರಿಗಳು,
ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು

11. ಡಾ. ತಿಪ್ಪೇರುದ್ರಯ್ಯ. ಸಿ – ಸದಸ್ಯ ಕಾರ್ಯದರ್ಶಿ
ನಿರ್ದೇಶಕರು, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ರಾಯಚೂರು.

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ, ಅಧ್ಯಕ್ಷರಾದ ಸನ್ಮಾನ್ಯ ಶ್ರೀ ರಾಮದಾಸ್‌ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

**ಆಡಳಿತ ಮಂಡಳಿ ಸಭೆಯ ಅಧ್ಯಕ್ಷರ ಸಮಕ್ಷಮದಲ್ಲಿ ತೆಗೆದುಕೊಂಡ ನಿರ್ಣಯಗಳು ಈ ಕೆಳಗಿನಂತಿವೆ.**

**ವಿಷಯ ಸೂಚಿ : ತಿದ್ದುಪಡಿ ಮಾಡಲಾದ Common Bye – Lawಗೆ ಅನುಮೋದನೆ ನೀಡುವ ಬಗ್ಗೆ.**

2005ನೇ ಸಾಲಿನಲ್ಲಿ ರಿಮ್ಸ್ ಸಂಸ್ಥೆಯ ಬೈಲಾವನ್ನು ನೊಂದಣಿ ಮಾಡಲಾಗಿದ್ದು, ಈ ಏಳು ವರ್ಷದ ಅವಧಿಯಲ್ಲಿ ಬೈಲಾದಲ್ಲಿನ ಕೆಲವೊಂದು ನ್ಯೂನ್ಯತೆಗಳನ್ನು ಸರಿಪಡಿಸಲು ರಚಿಸಲಾಗಿರುವ **Common Bye – Law**ವನ್ನು ಸಮಗ್ರವಾಗಿ ಪರಿಶೀಲಿಸಿ ಈ ಕೆಳಗಿನಂತೆ ತಿದ್ದುಪಡಿ ಮಾಡಲು ಆಡಳಿತ ಮಂಡಳೀ ಸಭೆಯಲ್ಲಿ ಸರ್ವಾನುಮತದಿಂದ ನಿರ್ಧರಿಸಲಾಯಿತು.

1) ಬೈಲಾ ಪುಸ್ತಕದಲ್ಲಿನ ಪುಟ ಸಂಖ್ಯೆ. 03ರಲ್ಲಿ ಆಡಳಿತ ಮಂಡಳಿಯ ಸದಸ್ಯರ ಪಟ್ಟಿಯ ಕ್ರಮ ಸಂಖ್ಯೆ. 06ರ ನಂತರ ಮಾನ್ಯ ಜಿಲ್ಲಾಧಿಕಾರಿಗಳು, ರಾಯಚೂರು ಇವರನ್ನು ಆಡಳಿತ ಮಂಡಳಿಯ ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಸರ್ವಾನುಮತದಿಂದ ಸಭೆಯಲ್ಲಿ ಅನುಮೋದನೆ ನೀಡಲಾಯಿತು.

Deputy Commissioner, Raichur is nominated as the member of Governing Council.

2) ಬೈಲಾ ಪುಸ್ತಕದಲ್ಲಿನ ಪುಟ ಸಂಖ್ಯೆ. 03ರಲ್ಲಿ ಸರ್ಕಾರೇತರ ಸಂಸ್ಥೆಯಲ್ಲಿ ಗುರುತಿಸಲ್ಪಟ್ಟ ಒರ್ವ ಶ್ರೇಷ್ಠ ಮಹಿಳೆಯನ್ನು ಸರ್ಕಾರದಿಂದ ನಾಮಕರಣ ಮಾಡಲಾಗುವುದು ಎಂಬ ವಾಕ್ಯವನ್ನು ಒರ್ವ ಶ್ರೇಷ್ಠ ಮಹಿಳೆಯನ್ನು ಸರ್ಕಾರದಿಂದ ಆಡಳಿತ ಮಂಡಳಿ ಸಭೆಯ ಸದಸ್ಯರಾಗಿ ನಾಮಕರಣ ಮಾಡಲಾಗುವುದು ಎಂದು ತಿದ್ದುಪಡಿ ಮಾಡುವ ವ್ಯಾಕ್ಯಕ್ಕೆ ಸಭೆಯಲ್ಲಿ ಅನುಮೋದನೆಯನ್ನು ನೀಡಲಾಯಿತು.

An eminent social worker nominated by Government.

3) ಬೈಲಾ ಪುಸ್ತಕದಲ್ಲಿನ ಪುಟ ಸಂಖ್ಯೆ. 40 ರಲ್ಲಿ ಆಡಳಿತ ಮಂಡಳಿಯ ತಪ್ಪು ನಿರ್ಧಾರಗಳಿಂದ ಅನ್ಯಾಯಕ್ಕೊಳಗಾಗದ ವ್ಯಕ್ತಿಗಳು ಸರ್ಕಾರಕ್ಕೆ ದೂರನ್ನು ಸಲ್ಲಿಸಬಹುದೆಂಬ ಅಂಶವನ್ನು ಅಳವಡಿಸಲು / ಸೇರಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

Any person aggrieved by the decision of Governing Council, an appeal shall lie with the Government.

4) **ರದ್ದುಗೊಳಿಸುವಿಕೆ ಮತ್ತು ಉಳಿತಾಯ (Repeal and Savings)** :- ಬೈಲಾ ಪುಸ್ತಕದಲ್ಲಿನ ಪುಟ ಸಂಖ್ಯೆ. 40 ರಲ್ಲಿ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು ಈವರೆಗೆ ಯಾವುದೇ ಆದೇಶ ಹೊರಡಿಸಿದ, ನೇಮಕಾತಿಯನ್ನು ಮಾಡಿದ ಹಾಗು ಈ ಬಗ್ಗೆ ಏನಾದರೂ ಸೂಕ್ತ ಕ್ರಮಗಳನ್ನು ಕೈಗೊಂಡಿದ್ದಲ್ಲಿ ಅವುಗಳನ್ನು ಪರಿಗಣಿಸಿ ಬೈಲಾವನ್ನು ತಿದ್ದಪಡಿ/ರದ್ದು ಪಡಿಸುವವರೆಗೆ ಬೈಲಾ ನಿಯಮಾವಳಿಗಳು ಚಾಲ್ತಿಯಲ್ಲಿರುತ್ತವೆ ಎಂಬ ಅಂಶವನ್ನು ಬೈಲಾದಲ್ಲಿ ಅಳವಡಿಸಲು / ಸೇರಿಸಲು ಸಭೆಯು ಅನುಮೋದನೆ ನೀಡಿತು.

The Bye – Laws of Raichur Institute of Medical Sciences, Raichur are hereby repealed. Provided that any order issued, any appointment made, anything done or any action taken under the provisions of any of the repealed byelaws shall be deemed to have been issued, made, done or taken under the provisions of these byelaws and shall, until altered or cancelled continue to be inforce.

5) ರಿಮ್ಸ್ ಸಂಸ್ಥೆಗೆ ಸಂಬಂಧಿಸಿದ ಯಾವುದೇ ವ್ಯಾಜ್ಯವು ರಾಯಚೂರಿನ ನ್ಯಾಯಲಯದ ವ್ಯಾಪ್ತಿಗೆ ಒಳಪಟ್ಟಿರುತ್ತದೆ ಎಂಬ ಅಂಶವನ್ನು ಬೈಲಾದಲ್ಲಿ ಅಳವಡಿಸಲು/ ಸೇರಿಸಲು ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ನೀಡಿತು.

Arbitrary legal jurisdiction is Raichur.

ವಂದನೆಗಳೊಂದಿಗೆ ಆಡಳಿತ ಮಂಡಳಿ ಸಭೆಯು ಮುಕ್ತಾಯವಾಯಿತು.

(ಡಾ.ತಿಪ್ಪೇರುದ್ರಯ್ಯ.ಸಿ)
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಕೆ.ಎಸ್ ಪ್ರಭಾಕರ)
ಸರ್ಕಾರದ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಹೆಚ್.ಎ. ರಾಮದಾಸ್),
ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ,
ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು.



ಕೆ.ಎಸ್. ಪ್ರಭಾಕರ, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಇಲಾಖೆ
(ವೈದ್ಯಕೀಯ ಶಿಕ್ಷಣ)